ಶ್ರೀ ಎನ್. ರಾಚಯ್ಯ.— ಇಲ್ಲಿ ಪರಭಾರೆ ಮಾಡಿಲ್ಲ ಮಾಡಿದ್ದಾರೆ. ಮೊದಲನೇ ಕೇಸ್‌ನಲ್ಲಿ ೨೦ ಗುಂಟೆ ಜಮೀನನ್ನು ೩೦೦ ರೂಪಾಯಿಗಳಿಗೆ, ಎರಡನೇ ಕೇಸ್‌ನಲ್ಲಿ ಎರಡು ಎಕರೆಯನ್ನು ೨ ಸಾವಿರ ರೂಪಾಯಿಗಳಿಗೆ, ಮೂರನೇ ಕೇಸ್‌ನಲ್ಲಿ ಒಂದು ಎಕರೆ ಹತ್ತು ಗುಂಟೆ ಜಮೀನನ್ನು ೫೦೦ ರೂಪಾಯಿಗಳಿಗೆ, ಳನೇ ಕೇಸ್‌ನಲ್ಲಿ ಒಂದು ಎಕರೆಯನ್ನು ೨೦೦ ರೂಪಾಯಿಗಳಿಗೆ ಮಾಡಿದ್ದಾರೆ. ಈ ರೀತಿ ಒಟ್ಟು ೩ ಸಾವಿರ ರೂಪಾಯಿಗಳಿಗೆ ಮಾರಿದ್ದಾರೆ. ಆ ಹಣ ಸರ್ಕಾರಕ್ಕೂ ಬಂದಿಲ್ಲ, ಪಂಚಾಯಿತಿಯ ಫಂಡ್‌ಗೂ ಹೋಗಿಲ್ಲ. ಈ ಬಗ್ಗೆ ತಹಶೀಲ್‌ದಾರರು ವಿಚಾರಣೆ ಮಾಡುತ್ತಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.— ಈ ಜಮೀನುಗಳನ್ನು ಪಂಚಾಯತ್ ರಾಜ್ ವಂತ್ರಿಗಳ ಗಮನಕ್ಕೆ ಹಾಗೂ ಸರ್ಕಾರದ ಗಮನಕ್ಕೆ ತರದೆ ಕೆಲವರು ಅತಿಕ್ರಮಣ ವಂತ್ತು ದುರಾಕ್ರಮಣ ಮಾಡಿಕೊಂಡಿರುವ ಪ್ರಯುಕ್ತ, ಅಂತಹ ಜಮೀನುಗಳನ್ನು ವಾಪಸ್ ಪಂಚಾಯಿತಿಗೆ ತೆಗೆದುಕೊಂಡು ಕ್ರಮಬದ ವಾಗಿ, ನ್ಯಾಯಬದ್ಧವಾಗಿ ವಂತ್ತು ನಿಯಮಗಳನ್ನು ಅನುಸರಿಸಿ ವಿಲೇವಾರಿ ಮಾಡಿಸುತ್ತೀರಾ ?

ಶ್ರೀ ಎನ್. ರಾಚಯ್ಯ.— ಹಿಂದಿನ ಸರ್ಕಾರದವರು ೧೯೭೦ನೇ ಇಸವಿಯಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ, ತಾ : ೧-೭-೧೯೬೫ರವರೆಗೆ ಯಾರು ಯಾರು ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ, ಅದೆಲ್ಲವನ್ನೂ ಅವರಿಗೆ ಕ್ರಾಯಂ ಮಾಡಬೇಕೆಂದು ತಿಳಿಸಿದ್ದರು. ಅದರಂತೆ ರವಿನ್ಯೂ ಅಧಿಕಾರಿಗಳು ಮಾಡುತ್ತಿದ್ದರು. ಆದರೆ ನಾನು ಈ ಆಲಾಖೆಯನ್ನು ವಹಿಸಿಕೊಂಡಮೇಲೆ ಗೋಮಾಳಕ್ಕೆ ಸಂಬಂಧಪಟ್ಟ ಒಂದು ಜಮೀನನ್ನು ಬಿಡಂಗಡೆ ಮಾಡಬೇಕಾದರೂ ಸಹ ಅದು ಸಂಬಂಧಪಟ್ಟ ಇಲಾಖೆಯ ಮತ್ತು ಸಂಬಂಧಪಟ್ಟ ಮಂತ್ರಿಗಳ ಆಜ್ಞೆಯಿಲ್ಲದೆ ಮಾಡಬಾರದೆಂದು ಹೇಳಿದ್ದೇನೆ. ಆದರಂತೆ ಈಗ ಪ್ರತಿ ತಿಂಗಳೂ ಇದಕ್ಕೆ ಸಂಬಂಧಪಟ್ಟಂತೆ ಹತ್ತಾರು ಫೈಲುಗಳು ಬರುತ್ತಿವೆ. ಈಗ ಒತ್ತುವರಿ ಮಾಡುವುದಕ್ಕಾಗಲೀ ಪರಭಾರೆ ಮಾಡುವುದಕ್ಕಾಗಲೀ ಅವಕಾಶ ಇಲ್ಲ. ಆಂಥಾದ್ದು ಏನಾದರೂ ಕಂಡುಬಂದರೆ ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಜಮೀನುಗಳನ್ನು ಬಿಡಿಸುತ್ತಿದ್ದೇವೆ.

ಶ್ರೀ ಆರ್. ಎಸ್. ಪಾಟೀಲ್.— ಇಲ್ಲಿ ಮೊದಲನೆಯ ಪ್ರಶ್ನೆಗೆ ೫ ಮಂದಿ ಎಂದು ಉತ್ತರ ಕೊಟ್ಟಿದ್ದೀರಿ. ಮಂದೆ (ಉ) ಪ್ರಶ್ನೆಗೆ ಉತ್ತರವಾಗಿ ಒಂದೂ ಇಲ್ಲ ಎಂದು ಹೇಳಿದ್ದೀರಿ. ಅಂದರೆ ಸಂಬಂಧಪಟ್ಟವರ ಮೇಲೆ ಕಾರ್ಯಕ್ರಮ ಕೈಕೊಳ್ಳುವುದರಲ್ಲಿ ವಿಳಂಬವಾಗಿದೆಯೇ ಅಥವಾ ಕ್ರಮ ಕೈಕೊಳ್ಳಬಾರದೆಂದು ಏನಾದರೂ ನಿರ್ಣಯ ತೆಗೆದುಕೊಂಡಿದ್ದೀರಾ ಹೇಗೆ ?

ಶ್ರೀ ಎನ್. ರಾಚಯ್ಯ.— ಇಲ್ಲಿ ಕ್ರಮವಾಗಿ ಕೇಸ್‌ಗಳನ್ನು ದಾಖಲೆ ಮಾಡಿಲ್ಲ. ಈಗ ಪ್ರತಿ ಕೇಸ್‌ನ ಬಗೆಯೂ ಸಹ ವಿಚಾರಣೆಯಾಗುತ್ತಿದೆ. ವಿಚಾರಣೆಯಾದ ಮೇಲೆ ಕ್ರಿಮಿನಲ್ ಪ್ರಾಸಿಕ್ಯೂಷನ್ ಕ್ರಮ ಕೈಕೊಳ್ಳುತ್ತೇವೆಂದು ಅದರ ಅರ್ಥ.

ಶ್ರೀ ಕೆ. ಪ್ರಭಾಕರ್.—ಗೊಬ್ಬರ ದುರ್ವಿನಿಯೋಗ ಮಾಡಿ, ಜಮೀನು ಅಕ್ರಮವಾಗಿ ತೆಗೆದುಕೊಂಡಿರತಕ್ಕ ಕೇಸ್‌ಸ್ ಎಷ್ಟು ಎಂದು ಹೇಳಿದರೆ, ಅದಕ್ಕೆ 'ನಿಲ್' ಎಂದು ಒಂದು ಕಡೆ ಹೇಳಿದಿರಿ, ಇನ್ನೊಂದು ಕಡೆ ತಹಶೀಲ್ದಾರ್ ಈ ಕೇಸುಗಳನ್ನು ಎನಕ್ವೈರಿ ಮಾಡುತ್ತಾರೆ ಎಂದು ಹೇಳಿದಿರಿ. ಇದರಲ್ಲಿ ಯಾವುದು ಸತ್ಯ ಸ್ವಾಮಿ ?

ಶ್ರೀ ಎನ್. ರಾಚಯ್ಯ.—ವಿಚಾರ ಮಾಡುವುದು ಕೇಸಸ್ ಆಗುವುದಿಲ್ಲ. ಕೋರ್ಟ್ ಮುಂದೆ ಹೋಗಿ ವಿಚಾರಣೆಯಾದಾಗ ಕೇಸ್ ಎಂದು ಬರುತ್ತದೆ.

Villages in Nagamangala Taluk without Panchayats

783 SRI H.T. KRISHNAPPA (Nagamangala) —:

Will the Minister for Rural Development and Social Welfare be pleased to state.—

(*a*) whether there are any villages in Nagamangala taluk which do not have any Panchayats ;

(*b*) if so, the reasons for the same ?

SRI N. RACHAIAH.—(Minister for Rural Development and Social Welfare.—

(*a*) No.

(*b*) The question does not arise.

ಶ್ರೀ ಎಚ್. ಟಿ. ಕೃಷ್ಣಪ್ಪ.—ನನ್ನ (ಅ) ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ನಾನು ಪ್ರಶ್ನೆ ಕೇಳಿರುವುದರಲ್ಲಿ ತಪ್ಪಿದೆಯೋ ಅಥವಾ ತಾವು ಉತ್ತರ ಕೊಟ್ಟಿರುವುದರಲ್ಲಿ ತಪ್ಪಿದೆಯೋ ಇತ್ಯರ್ಥವಾಗಬೇಕಾಗಿದೆ ತಾವು ತಪ್ಪು ಅಥವಾ ಸತ್ಯಕ್ಕೆ ದೂರವಾದಂಥ ಉತ್ತರವನ್ನು ಕೊಟ್ಟಿದ್ದೀರಿ ಎಂದು ವಿಷಾದದಿಂದ ಹೇಳಬೇಕಾಗಿದೆ. ಕಾರಣ ಏನೆಂದರೆ ಕಳೆದ ಸಾರಿ ಪಂಚಾಯಿತಿಗೆ ಚುನಾವಣೆ ನಡೆಯುವ ಕಾಲದಲ್ಲಿ ನಮ್ಮ ತಾಲ್ಲೂಕಿನ ಕಾಂತಪುರ ಎನ್ನುವ ಪಂಚಾಯಿತಿ ವ್ಯಾಪ್ತಿಗೆ ಸೇರಿದಂಥ ೪–೫ ಹಳ್ಳಿಯವರು ನಮಗೆ ಬೇರೆ ಪಂಚಾಯಿತಿಗೆ ವರ್ಗಮಾಡಿ ಎಂದು ಹೈಕೋರ್ಟಿಗೆ ರಿಟ್ ಪಿಟಿಷನ್ ಹಾಕಿದ್ದರು, ನಂತರ ಹೈಕೋರ್ಟ್‌ನವರು ಸ್ಟೇ ಆರ್ಡರ್ ಕೊಟ್ಟು ಚುನಾವಣೆಗಳನ್ನು ನಿಲ್ಲಿಸಿದರು. ಆವೇಲೆ ರಘುರಾಮಪುರ, ಗಂಗೇಹಳ್ಳಿ ಪಂಚಾಯಿತಿಗೆ ಸೇರಿಸಬೇಕು ಎಂದು ತೀರ್ಮಾನ ಮಾಡಿದರು. ಅನಂತರ ಚುನಾವಣೆಗಳು ನಡೆಯಲಿಲ್ಲ. ತಾವು ಸಮರ್ಪಕವಾಗಿ ನಡೆದಿದೆ ಎನ್ನುವ ಭಾವನೆ ಬರುವ ರೀತಿಯಲ್ಲಿ ಉತ್ತರ ಕೊಟ್ಟಿದ್ದೀರಿ. ಆದುದರಿಂದ ಪ್ರಶ್ನೆ ಕೇಳಿರುವವನು ನಾನು ಮಂಂಖ್ರಿನೋ ಅಥವಾ ಉತ್ತರ ಕೊಟ್ಟಿರುವವರು ಮಂಂಖ್ರಿರೋ ?

† ಶ್ರೀ ಎನ್. ರಾಚಯ್ಯ.—೪–೩–೧೯೭೫ರಲ್ಲಿ ಚೀಫ್ ಎಕ್ಸಿಕ್ಯುಟಿವ್ ಆಫೀಸರಿಂದ ಬಂದಿರತಕ್ಕ ಉತ್ತರ ಇದು. ನಾಗಮಂಗಲ ತಾಲ್ಲೂಕಿನಲ್ಲಿ ಸೆನ್‌ಸಸ್ ಪ್ರಕಾರ ೩೬೫ ಗ್ರಾಮಗಳಿವೆ, ೬೭ ಪಂಚಾಯಿತಿಗಳಿವೆ. ಈ ವರದಿ ಪ್ರಕಾರ ಯಾವ ಒಂದು ಗ್ರಾಮಕ್ಕೂ ಕೂಡ ಪಂಚಾಯಿತಿ ಇಲ್ಲದೆ ಇಲ್ಲ. ತಾವು ಹೈಕೋರ್ಟ್‌ನಲ್ಲಿ ತೀರ್ಮಾನವಾಗಿದೆ ಎಂದೂ ಹೇಳುತ್ತೀರಿ. ಅದು ಆಗಿರಬೇಕೋ ಏನೊ ನನ್ನ ಗಮನಕ್ಕೆ ಬಂದಿಲ್ಲ. ಆಜ್ಞೆ ಬಂದ ಮೇಲೆ ಆ ಗ್ರಾಮಕ್ಕೆ ಪಂಚಾಯಿತಿ ಇರಬೇಕೇ ಬೇಡವೇ ಎನ್ನುವುದನ್ನು ಯೋಚನೆ ಮಾಡೋಣ.

ಶ್ರೀ ಎಚ್. ಟಿ ಕೃಷ್ಣಪ್ಪ —ಅಲ್ಲಿರತಕ್ಕ ಜನರು ನಾಗರೀಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅಲ್ಲಿ ೪–೫ ವರ್ಷಗಳಿಂದ ಪಂಚಾಯಿತಿ ಅಸ್ತಿತ್ವದಲ್ಲಿ ಇಲ್ಲ. ಇದರಿಂದ ತೊಂದರೆ ಎಷ್ಟು ಆಗುತ್ತಿವೆ ಎನ್ನುವುದನ್ನು ವಿವರಣೆಗಳನ್ನು ಕೊಟ್ಟು ಹೇಳಬೇಕಾದ ಪ್ರಮೇಯ ಇಲ್ಲ. ಅಂಥಾದ್ದರಲ್ಲಿ ಚುನಾವಣೆಗಳು ನಡೆಯದೆ ವಿಳಂಬವಾಗಿರುವುದಕ್ಕೆ ಕಾರಣಗಳೇನು ಎಂದು ಕೇಳುವ ದೃಷ್ಟಿಯಿಂದ ನಾನು ಪ್ರಶ್ನೆಯನ್ನು ಹಾಕಿದ್ದು. ಯಾವ ಪಂಚಾಯಿತಿಯಲ್ಲೂ ಆ ಪರಿಸ್ಥಿತಿ ಇಲ್ಲ ಎನ್ನುವ ತರಹ ಉತ್ತರ ಕೊಟ್ಟಿದ್ದೀರಿ. ದಯ ಮಾಡಿ ಚುನಾವಣೆಗಳನ್ನು ಕೂಡಲೇ ನಡೆಸುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎನ್ ರಾಚಯ್ಯ.—ತಮಗೆ ನಾನು ಏನಾದರೂ ಉತ್ತರ ಹೇಳಂವಾಗ ಸತ್ಯಾಂಶವನ್ನು ಮುಚ್ಚಿಡಬೇಕು ಎನ್ನುವ ಉದ್ದೇಶ ನನಗೆ ಇಲ್ಲ. ಈ ವರದಿ ಪ್ರಕಾರ ನಾನು ಉತ್ತರವನ್ನು ಹೇಳುತ್ತಿದ್ದೇನೆ. ಕಾನೂನು ಪ್ರಕಾರ ಯಾವುದಾದರೂ ಪಂಚಾಯಿತಿಯನ್ನು ವ್ಯವಸ್ಥೆ ಮಾಡುವುದರಲ್ಲಿ ಲೋಪದೋಷವಾಗಿರುವುದನ್ನು ನನ್ನ ಗಮನಕ್ಕೆ ತಂದರೆ ಅದನ್ನು ಸರಿಪಡಿಸುತ್ತೇನೆ. ತಮಗೆ ಬೀದರ್. ತಾಲ್ಲೂಕಿನಲ್ಲಿ ಏನಾಯಿತಂ ಎನ್ನುವುದುಗೊತ್ತಿದೆ ಡೀಫಂಕ್ಟ್ ಆದುದರಿಂದ ಇದುವರೆಗೆ ಕಾನ್‌ಸ್ಟಿಟ್ಯೂಟ್ ಮಾಡುವುದಕ್ಕೆ ಆಗಲಿಲ್ಲ. ರಿಟ್ ಪಿಟಿಷನ್ ಹೈಕೋರ್ಟ್‌ನಲ್ಲಿ ಹಾಕಿದೆ. ಪಂಚಾಯಿತಿಗಳು ಇದ್ದರೂ ಸಹ ಕೆಲವು ಕೆಲಸ ಮಾಡುತ್ತಾ ಇಲ್ಲ. ಮತ್ತೆ ಕೆಲವು ಕೆಲಸ ಮಾಡುತ್ತಾ ಇವೆ. ಕಾನೂನು ಬದ್ಧವಾಗಿ ಪಂಚಾಯಿತಿಗಳಿದ್ದರೂ ಕೆಲಸ ಸಮರ್ಪಕವಾಗಿ ಆಗುತ್ತಾ ಇರುವುದಿಲ್ಲ ಇರೆಗ್ಯುಲಾರಿಟೀಸ್ ಆಗುತ್ತಾ ಇರುತ್ತವೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸಚಿವರು ಉತ್ತರ ಕೊಡುತ್ತಾ ಶ್ರೇಷ್ಠ ನ್ಯಾಯಾಲಯದ ತೀರ್ಪು ತಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳಿದರು. ಅವರ ಗಮನಕ್ಕೆ ಬಂದಿಲ್ಲವೋ ಅಥವಾ ಇಲಾಖೆಯವರ ಗಮನಕ್ಕೆ ಬಂದಿಲ್ಲವೊ ? ಅವರ ಗಮನಕ್ಕೆ ಬಂದಿಲ್ಲ ಎಂದರೆ, ಅದು ಅವರ ಅಪರಾಧ ಅಲ್ಲವೇ ?

ಶ್ರೀ ಎನ್. ರಾಚಯ್ಯ —ಅಂಥ ಒಂದು ಆಜ್ಞೆ ಇದ್ದ ಪಕ್ಷದಲ್ಲಿ ಅದನ್ನು ತರಿಸಿಕೊಂಡು ನಾನು ಜಾರಿಗೆ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಅಲ್ಲಿ ಇಲ್ಲಿಯವರೆಗೆ ಪಂಚಾಯಿತಿಗೆ ಚುನಾವಣೆ ನಡೆದಿಲ್ಲ, ಅಲ್ಲದೆ ಪಂಚಾಯಿತಿ ಅಸ್ತಿತ್ವದಲ್ಲಿ ಇಲ್ಲ. ಸಂಬಂಧಪಟ್ಟ ಅಧಿಕಾರಿಗಳು ಸತ್ಯಕ್ಕೆ ದೂರವಾದ ವಿಷಯವನ್ನು ಒದಗಿಸಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ರಾಚಯ್ಯ.—ಜವಾಬ್ದಾರಿಯುತವಾಗಿ ಕೆಲಸ ಮಾಡದೇ ಹೋದರೆ, ನಿಯಮದ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆಂದು ನಾನು ಭರವಸೆ ಕೊಡುತ್ತೇನೆ.

Waiving of Penal Interest By C.I.T,B.

794. SRI DODDATHIMMAIAH (Gulur):—

Will the Minister for Law and Municipal Administration be pleased to state.—

(*a*)whether it is a fact that the City Improvement Trust Board has recommeded to the Government for waiving the penal interest of 3 per cent of the economically weaker sections, who failed to pay the full price of the sites allotted to them within the specified time ;

(*b*) if so, the action the Government has taken on this recommendation ?

SRI D.K. NAIKER (Minister for Law and Munical Administration)

(*a*) Yes.

(*b*) Government in letter No. HMA 135 MNX 74, dated 15th July 1974 have directed the City Improvement Trust Board to propose draft amendment to the rules.

SRI DODDATHIMMAIAH —May I know, as it is already 9 months since you have addressed a letter to the Trust Board, whether you have received replies with regard to the proposal of amendments to the rules ?

† SRI D. K NAIKAR.—According to the information the received from the Chairman, the matter is placed before the Board. After the Board takes a decision the matter will be submitted to the Government.

SRI DODDATHIMMAIAH.—Is it a fact that the Trust Board has recommended that 15% penalty be levied on the economically stronger sections of the society ? What action have you taken on that ?

SRI D. K. NAIKAR.—No. In the amendments there were about four classes proposed by the C.I.T.B. One is economically weaker sections—no interest be levied, second is, people coming under middle income group interest leviable 9 to 12% ; for higher income group 9 to 15% and in respect of other sites sold by auction or sale 15% interest. So, under the rules there is no provision for leving higher interest on higher income group. So, draft amendments to rules are asked to be submitted to the Government and it is still before the Board.

SRI M. S. KRISHNAN.—Is it not a fact that in the name of weaker sections, some of the economically stronger sections of the society are trying to take advantage of the concessions ? What action will you take to see that it is not misused ?